ತಗ್ಗಿಸಿದ ತಲೆ ಮೇಲೆತ್ತಲಿಲ್ಲ.

ಅಣ್ಣನ ಮಾತುಗಳನ್ನು ಕೇಳುತ್ತಾ ನನಗರಿವಿಲ್ಲದೆಯೇ ನಾನು ಮೇಲೆದ್ದೆ. ಉನ್ಮತ್ತನಂತೆ ಚಪ್ಪಾಳೆ ತಟ್ಟಿದೆ. ನನ್ನ ಪಕ್ಕದಲ್ಲಿದ್ದ ವಕೀಲ ಬಾಪಟ್ ಕೂಡ ಮೇಲೆದ್ದು ಚಪ್ಪಾಳೆ ತಟ್ಟಿದರು. ಇಡೀ ಕೋರ್ಟ್ ಭಾರೀ ಕರತಾಡನದಲ್ಲಿ ಮುಳುಗಿತು. ನ್ಯಾಯಾಧೀಶರು ತೀರ್ಪನ್ನು ನೀಡಲು ಒಳಗೆ ಹೋದರು. ಬಾಪಟ್ ಓಡಿ ಬಂದು ಅಣ್ಣನವರ ಕೈ ಕುಲುಕಿ 'ನನ್ನಿಂದ ಕೂಡ ಇಷ್ಟು ಚೆನ್ನಾಗಿ ನಿಮ್ಮ ಕೇಸ್‌ನ ಪರ ವಾದ ಮಾಡಲು ಆಗುತ್ತಿರಲಿಲ್ಲ. ನೀವು ವಕೀಲಿ ಓದಿಲ್ಲ ಎಂದರೆ ನಂಬುವುದೇ ಕಷ್ಟ. ಒಬ್ಬ ಕಲಾವಿದ ಹೀಗೆ ಮಾತನಾಡಬಲ್ಲ ಎಂದು ನನಗೆ ತಿಳಿದಿರಲಿಲ್ಲ. ನಿಮಗೆ ಖಂಡಿತಾ ಜಯ ಸಿಗುತ್ತದೆ' ಎಂದರು.

'ಇಲ್ಲ, ನಾನೇನೂ ಮಾತನಾಡಲಿಲ್ಲ' ಎಂದರು ಅಣ್ಣ.

'ಅಂದರೆ?'

'ನೋಡಿ ಬಾಪಟ್ ತನ್ನ ಪಾಡಿಗೆ ತಾನಿರುವ ಒಂದು ಸಣ್ಣ ಇರುವೆಯೂ ಅದನ್ನು ಕೆಣಕಿದರೆ ನಮ್ಮನ್ನು ಕಚ್ಚುತ್ತದೆ. ಆದರೆ ಇಲ್ಲಿ ನನ್ನ ಇಡೀ ಬದುಕನ್ನೇ ಸವಾಲಿಗೊಡ್ಡಲಾಯಿತು. ನಾನು ನಂಬಿದ ನನ್ನ ಕಲೆಯೇ, ಸಿದ್ಧಾಂತವೇ, ನನಗೆ ಪ್ರಶ್ನಾರ್ಥಕ ಚಿನ್ಹೆಯಾಯಿತು. ಆದ್ದರಿಂದ ತನ್ನನ್ನುಳಿಸಿಕೊಳ್ಳಲು ನನ್ನ ಕಲೆಯೇ ನನ್ನ ಪರವಾಗಿ ಮಾತನಾಡಿತು. ನಾನು ನನ್ನ ಇಡೀ ಬದುಕನ್ನೇ ಅದಕ್ಕೆ ಮುಡಿಪಾಗಿಸಿದ್ದೇನೆ. ಅದಕ್ಕೆ ಅದು ನನ್ನನ್ನು ಕಾಪಾಡಿತು. ಇನ್ನೆಂದಾದರೂ ಹೀಗೆ ಮಾತನಾಡು ಎಂದರೆ ಹಾಗೆ ಮಾಡಬಲ್ಲೆ ಎಂಬ ನಂಬಿಕೆ ನನಗಿಲ್ಲ. ಆದರೆ ಈಗ ನಾನು ಮಾಡಿದ ವಾದಗಳು ನನ್ನ ಚಿತ್ರಕಲೆಯಷ್ಟೇ ಅಮರ ಎಂಬುದಂತೂ ನಿಜ'.

## ರವಿವರ್ಮ

ಕೋರ್ಟ್‌ನೊಳಗೆ ಮತ್ತೆ ನಾವು ಬಂದಾಗ ನ್ಯಾಯಾಧೀಶರು ಜ್ಯೂರಿಯ ನಿರ್ಧಾರ ಓದಿದರು. ನಾನು ತಪ್ಪಿತಸ್ಥನಲ್ಲವೆಂದೂ, ನನ್ನ ಮೇಲಿನ ಆರೋಪಗಳೆಲ್ಲಾ ಆಧಾರರಹಿತವಾದುವೆಂದೂ, ನಾನು ಕಲೆಯನ್ನು ತಡೆಯಿಲ್ಲದೆ ಮುಂದುವರೆಸಿಕೊಂಡು ಹೋಗಬಹುದೆಂದೂ ಜ್ಯೂರಿ ಒಮ್ಮುಖವಾದ ತೀರ್ಪಿತ್ತಾಗ, ನಾನು ಆನಂದಾತಿರೇಕದಿಂದ ಅತ್ತಿದ್ದೆ! ಈ ವಿಚಾರವನ್ನು ತಕ್ಷಣ ಸುಗಂಧಳಿಗೆ ತಿಳಿಸಬೇಕೆಂದು ಆತುರವಾದರೂ ಮೊದಲು ಮನೆಗೆ ಹೋಗಿ ಭಗವತಿಗೆ ಕೃತಜ್ಞತೆ ತಿಳಿಸಬೇಕೆನಿಸಿತು.

ಕೋರ್ಟ್‌ನಿಂದ ಹೊರಗೆ ಜಾರಿಕೊಳ್ಳಲು ಹವಣಿಸುತ್ತಿದ್ದ ಕೇಶವಶಾಸ್ತ್ರಿಗಳ ಕಡೆ ನನ್ನ ಗಮನ ಹರಿಯಿತು. ನಾನು ಜೋರಾಗಿ ಕೂಗಿದೆ 'ಶಾಸ್ತ್ರಿಗಳೇ ನೀವು ತುಂಬಾ ಚೆನ್ನಾಗಿ ವಾದ ಮಾಡಿದಿರಿ, ನಿಜವಾದ ಗೆಲುವು ನಿಮ್ಮದೇ'

'ಅದು ಹೇಗೆ?' ದಿಗ್ಭ್ರಮೆಯಾದರು ಶಾಸ್ತ್ರಿಗಳು.

'ಶಾಸ್ತ್ರಿಗಳೇ ನಾನೂ ನಂಬೂದರಿ ಬ್ರಾಹ್ಮಣನೇ. ನಮ್ಮದು ಅತ್ಯಂತ ಕಟುವಾದ ಸಂಪ್ರದಾಯಸ್ಥ ಕುಟುಂಬ. ಇಂತಹ ವಂಶಸ್ಥರು ನಾನು ಬರೆದಂತಹ ಚಿತ್ರಗಳನ್ನು ಯಾವ ದೃಷ್ಟಿಯಲ್ಲಿ

## ಇಲ್ಲಿಯವರೆಗೆ

ಮಹಾರಾಜ ಸಯ್ಯಾಜಿರಾವ್ ಹೊಸದಾಗಿ ಪುನರ್ ನಿರ್ಮಿಸಲ್ಪಟ್ಟ ಲಕ್ಷ್ಮಿ ವಿಲಾಸ ಅರಮನೆಗೆ ಹಲವು ದೊಡ್ಡ ಗಾತ್ರದ ಚಿತ್ರಪಟಗಳು ಬೇಕಿದ್ದವು. ಅವರು ಯೂರೋಪ್ ಪ್ರವಾಸ ಮುಗಿಸಿ ಬರುವಾಗ ಹಲವು ಚಿತ್ರಗಳನ್ನು ಖರೀದಿಸಿ ತಂದಿದ್ದರೂ ಅವೆಲ್ಲ ಪಾಶ್ಚಾತ್ಯ ಚಿತ್ರಕಾರರದ್ದಾಗಿತ್ತು. ಭಾರತೀಯ ಕಲಾಕಾರರು ಚಿತ್ರಿಸಿದ್ದ ಚಿತ್ರಗಳೇ ಬೇಕು ಎಂದು ಸಯ್ಯಾಜಿರಾವ್ ದಿವಾನ್ ಮಾಧವರಾವ್‌ರಲ್ಲಿ ಕೇಳುತ್ತಾರೆ. ಆಗ ಅವರು ಇಡೀ ಭಾರತದಲ್ಲಿ ಆಯ್ಕೆ ಮಾಡಬಹುದಾದ ಚಿತ್ರಕಾರರರೆಂದರೆ ಅದು ರವಿವರ್ಮರದ್ದು ಮಾತ್ರ ಎನ್ನುತ್ತಾರೆ. ಆದರೆ ರವಿವರ್ಮ ಕಿಳಿಮಾನೂರಿನಲ್ಲಿ ತಮ್ಮ ತಾಯಿ ತೀರಿಕೊಂಡಿರುವುದರಿಂದ ಬೊಂಬಾಯಿಯಿಂದ ಅಲ್ಲಿಗೆ ಹೋಗಿದ್ದು, ಅವರನ್ನು ಬರೋಡಾ ಆಸ್ಥಾನಕ್ಕೆ ಕರೆಸಿ ಮಾತನಾಡುವುದಾದರೆ ತುಂಬ ದಿನ ಹಿಡಿಯಬಹುದು ಎಂದು ಸಲಹೆ ಮಾಡುತ್ತಾರೆ. ಅದಕ್ಕಾಗಿ ರವಿವರ್ಮನಿಗೆ ಕರೆ ಮಾಡಿ 12–14 ಚಿತ್ರಗಳು ಬೇಕು ಎಂದು ಹೇಳುತ್ತಾರೆ. ಆಗ ರವಿವರ್ಮ ಉತ್ತರಭಾರತ ಪ್ರವಾಸ ಹೋಗಲಿದ್ದು ಕೆಲಸಮಯ ಬೇಕಾದೀತು ಎನ್ನುತ್ತಾರೆ.

ಅಯೋಧ್ಯಾ, ಗಯ ಕಾಶಿಯಾತ್ರೆ ಮುಗಿಸಿ ಬಂದು ರವಿವರ್ಮ ಸುಗಂಧ ಹಾಗೂ ಕಮಲೆಯರನ್ನು ರೂಪದರ್ಶಿಯನ್ನಾಗಿಸಿ ಹಲವು ಚಿತ್ರಗಳನ್ನು ಬರೆದು ಕೊಡುತ್ತಾರೆ. ಅದಾಗಿ ರವಿವರ್ಮ ಬರೋಡಾಕ್ಕೆ ಹಿಂತಿರುಗಿದಾಗ ಅಲ್ಲಿ ಪತ್ನಿ ಪುರುತಾರ್ಥಿಯ ಸಾವಿನ ಸುದ್ದಿ ತಿಳಿದು ಆಘಾತಗೊಳ್ಳುತ್ತಾರೆ. ಪತ್ನಿಯ ಉತ್ತಮ ಗುಣಗಳನ್ನು ನೆನೆದು ದುಃಖ ಉಕ್ಕಿ ಬರುತ್ತದೆ.



ರಾಜಾ ರವಿವರ್ಮನ ಕಲ್ಪನೆಯಲ್ಲಿ ಲಕ್ಷ್ಮಿ